Use of Police Dogs in Murder Cases

401. Sri M. H. JAYAPRAKASH NARAYAN (Sirsi).—

Will the Minister for Home and Municipal Administration be pleased to state :—

(*a*) the number of murder cases in which police dogs were used during the last three years up till now in the State ;

(*b*) the cases in which the dogs were used together with the number of dogs used and the expenditure incurred by the Police Department for the same ;

(*c*) after what time after the commitment of each of the said murders the investigation was undertaken by these police dogs ;

(*d*) how far this investigation undertaken by the police dogs is effective ;

(*e*) whether the police Department has contemplated to have police dogs of its own instead of getting and utilising police dogs from the neighbouring States ;

(*f*) if so, the annual expenditure that the State Government would incur for the maintenance of each dog ?

A.—Sri R. M. PATIL (Minister for Home and Municipal Administration).—

(*a*) In one case in the year 1967.

(*b*) One police dog was used. Expenditure incurred by the Police Department is Rs. 174.83.

(*c*) 19 hours after the incident.

(*d*) No useful clue was got by the police dog for the investigation.

(*e*) Yes.

(*f*) The expenditure on each dog would be as under :—

Non-recurring.—

Cost of a dog	...	Rs. 350
Cost of kit per dog	...	Rs. 150
Total non-recurring expenditure per dog	...	Rs. 500

Recurring.—

Cost of maintenance per dog per annum	...	Rs. 1,200
Other requisites such as soaps, towels etc. (p.a.)	...	Rs. 50
Total	...	Rs. 1,250

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್,—ಸ್ಪಾಎ, ಈ ಪತ್ತೇದಾರಿ ನಾಯಿಗಳನ್ನು ಕೊರೆ ಪ್ರಕರಣಗಳಲ್ಲಿ ಉಪಯೋಗಿಸುವಾಗ 19 ಗಂಟೆಗಳ ಕಾಲ ಅದಮೇರೆ ಉಪಯೋಗಿಸಿದ್ದಾರೆ. ಅದರಿಂದ ಯಾವ ವಿಧವಾದ ಪತ್ತೆಯನ್ನೂ ಕಂಡುಹಿಡಿದಿಲ್ಲ. ತಕ್ಷಣ ಉಪಯೋಗಿಸಿದ್ದರೆ ಪತ್ತೆ ಹಚ್ಚಲು ಅವಕಾಶವಾಗುತ್ತಿತ್ತಲ್ಲವೇ ?

†ಶ್ರೀ ಆರ್. ಎಂ. ಪಾಟೀಲ್:—ತಕ್ಷಣ ಉಪಯೋಗ ಮಾಡಬಹುದಾಗಿತ್ತು. ಆದರೆ ನಮ್ಮ ಸ್ಟೇಟ್‌ನೊಳಗೆ ಈ ಪೋಲೀಸ್ ಸ್ಕ್ವಾಡ್ ಇಲ್ಲ. ಮದರಾಸಿನಿಂದ ತಂದಿದ್ದಕ್ಕೆ ಸ್ವಲ್ಪ ತಡವಾಯಿತು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ನಮ್ಮ ರಾಜ್ಯದಲ್ಲಿ ಪತ್ತೇದಾರಿ ನಾಯಿಗಳನ್ನು ಇಡುವ ಅವಶ್ಯಕತೆಗೆ ಅಲ್ಲಿ ರೆಕರಿಂಗ್ ಅಂಡ್ ನಾನ್-ರೆಕರಿಂಗ್ ಎಕ್ಸ್‌ಪೆಂಡಿಚರ್ ಇಟ್ಟಿದ್ದೀರಿ. ಪತ್ತೇದಾರಿ ನಾಯಿಗಳನ್ನು ಯಾವಾಗ ತರಿಸುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಮೊನ್ನೆ ಮೊನ್ನೆ ಸ್ಯಾಂಕ್ಷನ್ ಮಾಡಿದ್ದೇವೆ. ನಾಯಿ ತಲಲಕ್ಕೆ ಹೋಗಿದ್ದಾರೆ ಎಂದು ಹೇಳಬಹುದು.

Sri SIDDIAH KASHIMATH.—With reference to answer (*d*), may I know what is the use of keeping these dogs for investigation here ?

ಶ್ರೀ ಆರ್. ಎಂ. ಪಾಟೀಲ್.—ಯಾವುದೋ ಒಂದು ಕೇಸಿನಲ್ಲಿ ಇದರ ಉಪಯೋಗವಾಗಿಲ್ಲ. ಮಾಹಿತಿ ಸಿಕ್ಕಿಲ್ಲ ಎಂದ ಮಾತ್ರಕ್ಕೆ ಆ ನಾಯಿಗಳು ಉಪಯೋಗವಾಗುವುದಿಲ್ಲ ಎಂದು ಹೇಳಲಕ್ಕೆ ಆಗುವುದಿಲ್ಲ. ಉಪಯೋಗವಾಗುತ್ತದೆ. ಅದನ್ನು ಉಪಯೋಗ ಮಾಡುವಂಥಾದ್ದು ಈಗಿನ ಪರಿಸ್ಥಿತಿಯೊಳಗೆ ಉತ್ತಮ ಎನ್ನುವುದು ನಿರ್ಣಯ ಮಾಡಿ ಈಗ ಅದರ ವ್ಯವಸ್ಥೆ ಮಾಡುವ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

Sri RAJA PID NAIK.—May I know whether these dogs are trained in India or somewhere in foreign countries ?

Sri R. M. PATIL.—These are Alsatian variety of dogs. They are available everywhere.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ಪತ್ತೇದಾರಿ ನಾಯಿಗಳನ್ನು ಹೊರ ರಾಜ್ಯಗಳಿಂದ ತರಿಸಿ ಇಲ್ಲಿಡಿಸುವುದಕ್ಕೆ 174.83 ರೂಪಾಯಿಗಳಷ್ಟು ಹಣ ಖರ್ಚಾಗಿದೆಯೆಂದು ಉತ್ತರದಲ್ಲಿ ಸೂಚನೆ ಮಾಡಿದ್ದೀರಿ. ಇದರಲ್ಲಿ ನಿಮ್ಮ ಸಿಬ್ಬಂದಿವರ್ಗ ಪೋಲೀಸಿನವರ ಖರ್ಚು ಕೂಡ ಸೇರಿದೆಯೋ ಅಥವಾ ಬರೀ ನಾಯಿ ಖರ್ಚು ಮಾತ್ರ ಸೇರಿದೆಯೋ ?

ಶ್ರೀ ಆರ್. ಎಂ. ಪಾಟೀಲ್.—ಅದರಲ್ಲಿ ನಾಯಿ ಮತ್ತು ನಾಯಿ ಕೂಡ ಇದ್ದವರದೂ ಸೇರಿದೆ.

ಶ್ರೀ ಪಾಟಾಳ್ ನಾಗರಾಜ್.—ತಾವು ಚಾಮರಾಜಪೇಟೆ ಕೊಲೆಯ ಸಂಬಂಧದಲ್ಲಿ ಮದ್ರಾಸ್‌ನಲ್ಲಿ ಇದ್ದಂಥ ಕೆಲವು ನಾಯಿಗಳನ್ನು ಕರೆಸಿದ್ದಿರಿ. ಅವು ಇಲ್ಲಿ ಬಂದು ಯಾರ್ಯಾರನ್ನೋ ಮೂಸಿ ನೋಡಿ ಹೊರಟುಹೋದುವು. ಆಮೇಲೆ ತಾವು ಯಾರನ್ನು ಹಿಡಿದಿರಿ ? ಇದುವರೆಗೆ ಆ ಕೊಲೆ ಪತ್ತಾರವೇನಾಗಿದೆಯೆಂಬುದೇ ಗೊತ್ತಾಗಲಿಲ್ಲ. ಆ ನಾಯಿಗಳು ಬಂದು ಹೋಗಿ ಈಗ್ಗೆ ಒಂದು ವರ್ಷವಾಯಿತು. ಇನ್ನೂ ಆ ಕೊರೆ ಪತ್ತೆಯಾಗಲಿಲ್ಲ. ಅದಕ್ಕೆ ಕಾರಣವೇನು ?

ಉಪಾಧ್ಯಕ್ಷರು.—ನಿಮ್ಮ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಅದು ಬೇರೆ ಪ್ರಶ್ನೆ.

ಶ್ರೀ ಆರ್. ಎಂ. ಪಾಟೀಲ್.—ಅದು ಈ ಪ್ರಶ್ನೆಗೆ ಸಂಬಂಧವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೊಲೆಗಳನ್ನು ಪತ್ತೆ ಹಚ್ಚುವುದರಲ್ಲಿ ನಾಯಿಗಳ ಬಳಕೆ ಬಹಳ ಪಾಗಿ ಉಪಯೋಗವಲ್ಲದ್ದು ಎಂಬುದಾಗಿ ಗೊತ್ತಾಗಿದೆ. ಇದನ್ನು ಕಂಡನಂತರ ಮದ್ರಾಸ್, ಇಂಗ್ಲೆಂಡ್, ಸ್ಕಾಟ್ಲೆಂಡ್, ರಾಜ್ಯಗಳವರು ನಾಯಿಗಳ ಉಪಯೋಗವನ್ನು ಈಗ ಕೈಬಿಡುತ್ತಾ ಇದ್ದಾರೆಂಬುದಾಗಿ ಆರ್. ಟಿ. ರಿಪೋರ್ಟ್ ಇದೆ. ಒಂದು ನಾಯಿಗೆ ಅವರ್ತಕ ವಾರ್ಷಿಕ ವೆಚ್ಚ 1,250 ರೂಪಾಯಿಗಳಾಗುತ್ತದೆಂದು ಲೆಕ್ಕ ಹಾಕಿದರೆ ಮುಂದೆ ಅದು ಇನ್ನೂ ಹಾಸ್ಯಿಯಾಗುತ್ತದೆ. ಅವು ಈಗಲೇ ಕೊಲೆಗಳನ್ನು ಪತ್ತೆ ಹಚ್ಚುವುದಕ್ಕಾಗುತ್ತಿಲ್ಲ. ಆದ್ದರಿಂದ ಆ ನಾಯಿಗಳ ಉಪಯೋಗವನ್ನು ಕೈಬಿಡುವುದಕ್ಕೆ ರಾಜ್ಯ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಕೈಬಿಡುವ ಪ್ರಶ್ನೆಯಿಲ್ಲ. ಅದನ್ನು ಪ್ರಯೋಗ ಮಾಡಬೇಕಾಗಿದೆ. ಮುಂದೆ ಉಪಯೋಗವಿಲ್ಲವೆಂದು ತಿಳಿದಾಗ, ಅದನ್ನು ಬಿಡಬೇಕಾಗಿ ಬಂದೀತು.